

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**,ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 12–10–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ನಾನು ಇಂದು ಪ್ರಸ್ತಾಪಿಸಲಿರುವ ಸಹಾಬರಿಗೆ ಸಂಬಂಧಿಸಿದ ಘಟನೆಗಳು ಮತ್ತು ವರದಿಗಳು ಚರಿತ್ರೆಯಲ್ಲಿ ಸವಿಸ್ತಾರವಾಗಿ ದಾಖಲಿಸಲ್ಪಟ್ಟಿಲ್ಲ. ಅವರ ಬಗ್ಗೆ ಸಂಕ್ಷಿಪ್ತ ವಿವರಣೆಗಳನ್ನು ಕೆಲವು ವಾಕ್ಯಗಳಲ್ಲಿ ಮಾತ್ರ ಪ್ರಸ್ತಾಪಿಸಲ್ಪಡಲಾಗಿವೆ. ಆದರೆ ಎಲ್ಲಾ ಬದರೀ ಸಹಾಬರ ಬಗ್ಗೆ ವಿವರಣೆಗಳು ಜಮಾಅತಿನ ಸಾಹಿತ್ಯದಲ್ಲಿ ಒಗ್ಗೂಡಿ ದಾಖಲಿಸಲ್ಪಡಲಿ ಎಂದು ನಾನು ಇಚ್ಛಿಸುವುದರಿಂದ ಸಂಕ್ಷಿಪ್ತವಾಗಿ ವಿವರಣೆಗಳು ಯಾವ ಬದರೀ ಸಹಾಬರ ಬಗ್ಗೆ ದೊರೆತಿವೆಯೋ ಅವರ ಹೆಸರನ್ನು ಸಹ ನಾನು ಹೇಳಲಿರುವೆನು. ಏಕೆಂದರೆ ಆ ಸಹಾಬರ ಬಗ್ಗೆ ಸಂಕ್ಷಿಪ್ತ ವಿವರಣೆ ದೊರೆತಿದ್ದರೂ ಅವರ ಸ್ಥಾನದ ಮಹತ್ವ ಹೇಗಿದೆ ಎಂದರೆ ಅವರ ಬಗ್ಗೆ ಪ್ರಸ್ತಾಪಿಸುವುದು ನಮಗೆ ಅನುಗ್ರಹದಾಯಕವಾಗುವುದು. ಆ ಜನರು ಬಡವರೂ ಬಲಹೀನರೂ ಆಗಿದ್ದರೂ ಇಸ್ಲಾಮ್ ಧರ್ಮವನ್ನು ಸಂರಕ್ಷಿಸುವವರಲ್ಲಿ ಪ್ರಥಮ ಶ್ರೇಣಿಯಲ್ಲಿದ್ದವರಾಗಿದ್ದರು. ಅವರು ಶತ್ರುಗಳ ಶಕ್ತಿಗೆ ಹೆದರಲಿಲ್ಲ. ಅವರು ಅಲ್ಲಾಹನ ಬಗ್ಗೆ ಪರಿಪೂರ್ಣವಾದ ಭರವಸೆಯನ್ನು ಹೊಂದಿದ್ದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಪ್ರೀತಿಯನ್ನು ಮತ್ತು ನಿಷ್ಠೆಯನ್ನು ಹೊಂದುವ ಪ್ರತಿಜ್ಞೆ ಮಾಡಿದ್ದರು. ಅದಕ್ಕೋಸ್ಕರ ತಮ್ಮ ಜೀವಾರ್ಪಣೆ ಮಾಡಲು ಅವರು ಹಿಂಜರಿಯಲಿಲ್ಲ. ಅವರು ತಮ್ಮ ನಿಷ್ಠೆಯ ಪ್ರತಿಜ್ಞೆ ಈಡೇರಿಸಿದ ಕಾರಣ ಅಲ್ಲಾಹನು ಸಹ ಅವರಿಗೆ ಸ್ವರ್ಗ ದೊರೆಯುವುದೆಂಬ ಶುಭವಾರ್ತೆ ನೀಡಿದನು ಮತ್ತು ಅವರ ಬಗ್ಗೆ ತನ್ನ ತೃಪ್ತಿಯನ್ನು ಪ್ರಕಟಿಸಿದನು.

ಹಝ್ರತ್ ಅಬ್ದುರ್ರಬ್ಬಿ ಬಿನ್ ಹಖ್ ಬಿನ್ ಔಸ್(ರ) ಒಬ್ಬ ಸಹಾಬಿಯಾಗಿದ್ದರು. ಅವರು ಬನೂ ಖಝ್ರಜ್ ಗೋತ್ರದ ಬನೂ ಸಾಅದ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಸಲ್ಮಾ ಬಿನ್ ಸಾಬಿತ್ ಬಿನ್ ವಖ್‌ಶ್(ರ). ಅವರು ಬದರ್ ಯುದ್ಧದಲ್ಲಿ ಹೋರಾಡಿದ್ದರು. ಉಹುದ್ ಯುದ್ಧದಲ್ಲಿ ಅಬೂ ಸುಫ್‌ಯಾನ್ ಅವರನ್ನು ಶಹೀದರನ್ನಾಗಿ ಮಾಡಿದ್ದರು. ಹಝ್ರತ್ ಸಲ್ಮಾರವರ ಪಿತ ಹಝ್ರತ್ ಸಾಬಿತ್ ಬಿನ್ ವಖ್‌ಶ್, ಅವರ ಚಿಕ್ಕಪ್ಪ ಹಝ್ರತ್ ಈಫಾ ಬಿನ್ ವಖ್‌ಶ್, ಅವರ ಸಹೋದರ ಹಝ್ರತ್ ಅಮರ್ ಬಿನ್ ಸಾಬಿತ್ ಸಹ ಉಹುದ್ ಯುದ್ಧದಲ್ಲಿ ಶಹೀದರಾಗಿದ್ದರು. ಇನ್ನೊಬ್ಬ ಸಹಾಬಿ ಸಿನಾನ್ ಬಿನ್ ಸೈಫೀ(ರ). ಅವರು ಖಝ್ರಜ್ ಗೋತ್ರದ ಬನೂ ಸಲ್ಮಾ ಶಾಖೆಗೆ ಸೇರಿದವರಾಗಿದ್ದರು. ನಬವೀ ಶಕ 12ರಲ್ಲಿ ಮುಸ್‌ಅಬ್ ಬಿನ್ ಉಮೈರ್‌ರವರ ತಬ್ಲೀಗ್ ಪ್ರಯತ್ನಗಳ ಪರಿಣಾಮವಾಗಿ ಅವರು ಇಸ್ಲಾಮ್ ಧರ್ಮಕ್ಕೆ ಪ್ರವೇಶಿಸಿದ್ದರು. ಬೈಅತೆ ಅಖಬ ಸಾನಿಯದ ಎಪ್ಪತ್ತು ಅನ್‌ಸಾರ್‌ಗಳಲ್ಲಿ ಅವರು ಒಬ್ಬರಾಗಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಖಂದಕ್ ಯುದ್ಧದಲ್ಲಿ ಸಹ ಭಾಗವಹಿಸಿದ್ದರು. ಅದರಲ್ಲಿಯೇ ಅವರು ಶಹೀದರಾದರು. ಇನ್ನೊಬ್ಬ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ಅಬ್ದುಮನಾಫ್(ರ). ಬನೂ ನುಅ್‌ಮಾನ್ ಗೋತ್ರಕ್ಕೆ ಸೇರಿದವರಾಗಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಮುಹ್‌ರಿಜ್ ಬಿನ್ ಆಮಿರ್ ಬಿನ್ ಮಾಲಿಕ್(ರ). ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಹುದ್ ಯುದ್ಧಕ್ಕೋಸ್ಕರ ಹೊರಡಲಿದ್ದ ದಿನ ಬೆಳಗ್ಗೆ ಅವರು ನಿಧನ ಹೊಂದಿದರು. ಅವರ ಹೆಸರನ್ನು ಉಹುದ್ ಯುದ್ಧದಲ್ಲಿ ಭಾಗವಹಿಸಿದ ಸಹಾಬರ ಹೆಸರಿನೊಂದಿಗೆ ಸೇರಿಸಲಾಯಿತು. ಏಕೆಂದರೆ ಅವರು ಉಹುದ್ ಯುದ್ಧದಲ್ಲಿ ಭಾಗವಹಿಸುವ ಸಂಕಲ್ಪ ಹೊಂದಿದ್ದರು.

ಹಝ್ರತ್ ಆಯಿಝ್ ಬಿನ್ ಮಾಯಿಸ್(ರ) ಅನ್‌ಸಾರಿ ಸಹಾಬಿಯಾಗಿದ್ದರು. ಹಿಜರಿ ವರ್ಷ 12ರಲ್ಲಿ ಹಝ್ರತ್ ಅಬೂಬಕರ್(ರ)ರವರ ಖಿಲಾಫತ್ ಕಾಲದಲ್ಲಿ ಯಾಮಾಮ ಯುದ್ಧದಲ್ಲಿ ಅವರು ಶಹೀದರಾದರು. ಇನ್ನೊಬ್ಬ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ಸಲ್ಮಾ ಬಿನ್ ಮಾಲಿಕ್ ಅನ್‌ಸಾರಿ(ರ) ಬದರ್ ಮತ್ತು ಉಹುದ್‌ನಲ್ಲಿ ಭಾಗವಹಿಸಿದ್ದರು. ಅವರು ಉಹುದ್ ಯುದ್ಧದಲ್ಲಿ ಶಹೀದರಾದರು. ಅವರು ಶಹೀದರಾದಾಗ ಅವರ ಮೃತ ಶರೀರವನ್ನು ಹಝ್ರತ್ ಮುಜ್‌ಝರ್ ಬಿನ್ ಝಿಯಾದರ ಮೃತ ಶರೀರದೊಂದಿಗೆ ಒಂದೇ ಚಾದರಿನಲ್ಲಿ ಸುತ್ತಿ ಒಂಟೆಯ ಮೇಲೆ ಇರಿಸಿ ಮದೀನಕ್ಕೆ ತರಲಾಯಿತು. ಹಝ್ರತ್ ಅಬ್ದುಲ್ಲಾ ಬಿನ್ ಸಲ್ಮಾರವರ ತಾಯಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ವಿನಂತಿಸಿದ್ದರು: ಓ ಅಲ್ಲಾಹನ ಸಂದೇಶವಾಹಕರೇ, ನನ್ನ ಪುತ್ರ ಬದರ್ ಯುದ್ಧದಲ್ಲಿ ಭಾಗವಹಿಸಿದ್ದನು. ಅವನು ಉಹುದ್ ಯುದ್ಧದಲ್ಲಿ ಶಹೀದನಾದನು. ಅವನ ಮೃತ ಶರೀರವನ್ನು ಮದೀನದಲ್ಲಿ ದಫನ್ ಮಾಡಬೇಕೆಂದು ಮತ್ತು ಅವನ ಸಾಮೀಪ್ಯದಿಂದ ಸಮಾಧಾನ ಗಳಿಸಬೇಕೆಂದು ನಾನು ಇಚ್ಛಿಸುತ್ತೇನೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದಕ್ಕೆ ಅನುಮತಿ ನೀಡಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಮಸ್‌ಊದ್ ಬಿನ್ ಖಲ್‌ದ(ರ). ಅವರು ಬದರ್ ಮತ್ತು ಉಹುದ್ ಯುದ್ಧದಲ್ಲಿ ಭಾಗವಹಿಸಿದ ಸಹಾಬಿಯಾಗಿದ್ದರು. ಮತ್ತೋರ್ವ ಸಹಾಬಿ ಹಝ್ರತ್ ಮಸ್‌ಊದ್ ಬಿನ್ ಸಅದ್ ಅನ್‌ಸಾರಿ(ರ). ಅವರು ಬಿಅ್‌ರ್ ಮಊನದ ಘಟನೆಯಲ್ಲಿ ಶಹೀದರಾದ ಸಹಾಬಿಯಾಗಿದ್ದರು. ಆದರೆ ಅವರು ಖೈಬರ್ ಯುದ್ಧದಲ್ಲಿ ಶಹೀದರಾದರು ಎಂದು ಮುಹಮ್ಮದ್ ಬಿನ್ ಅಮ್ಮಾರ ಮತ್ತು ಅಬೂ ನಈಮ್ ಹೇಳಿರುವರು. ಇನ್ನೊಬ್ಬ ಸಹಾಬಿ ಹಝ್ರತ್ ಝೈದ್ ಬಿನ್ ಅಸ್‌ಲಮ್ ಅನ್‌ಸಾರಿ(ರ). ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್

ಅಬೂಬಕ್ಕರ್(ರ)ರವರ ಖಿಲಾಫತ್ ಕಾಲದಲ್ಲಿ ತುಲೈಹ ಬಿನ್ ಖುವೈಲಿದುಲ್ ಅಸದಿ ವಿರುದ್ಧ ಹೋರಾಟದಲ್ಲಿ ಶಹೀದರಾದರು.

ಮತ್ತೋರ್ವ ಸಹಾಬಿ ಅಬುಲ್ ಮುಂಝಿರ್ ಯಝೀದ್ ಬಿನ್ ಆಮಿರ್(ರ). ಅವರು ಬೈಅತೆ ಅಖಬದಲ್ಲಿಯೂ ಬದರ್ ಉಹುದ್ ಯುದ್ಧಗಳಲ್ಲಿಯೂ ಭಾಗವಹಿಸಿದ್ದರು. ಇನ್ನು ಹಝ್ರತ್ ಅಮರ್ ಬಿನ್ ಸಅಲಬ ಅನ್‌ಸಾರಿ(ರ). ಅವರು ಬದರ್ ಮತ್ತು ಉಹುದ್‌ನಲ್ಲಿ ಭಾಗವಹಿಸಿದ್ದರು. ಅವರು ಹೇಳುತ್ತಾರೆ: ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಿಯಲ ಎಂಬಲ್ಲಿ ಭೇಟಿಯಾಗಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದೆನು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ತಲೆಯ ಮೇಲೆ ಕೈ ಸವರಿದರು. ಒಂದು ವರದಿ ಹೀಗಿದೆ: ಹಝ್ರತ್ ಅಮರ್ ಬಿನ್ ಸಅಲಬ ನೂರು ವರ್ಷ ಪ್ರಾಯದವರಾಗಿದ್ದಾಗ ಸಹ ಅವರ ತಲೆಯ ಮೇಲೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಂದೆ ಕೈ ಇರಿಸಿದ್ದ ಸ್ಥಳದಲ್ಲಿ ಅವರ ತಲೆಗೂದಲು ಬೆಳ್ಳಗಾಗಿರಲಿಲ್ಲ.

ಇನ್ನು ಹಝ್ರತ್ ಅಬೂ ಖಾಲಿದ್ ಹಾರಿಸ್ ಬಿನ್ ಖೈಸ್ ಬಿನ್ ಖಾಲಿದ್ ಬಿನ್ ಮುಖಲ್ಲಿದ್(ರ) ಅನ್‌ಸಾರಿ ಸಹಾಬಿಯಾಗಿದ್ದರು. ಅವರು ಬೈಅತೆ ಅಖಬದಲ್ಲಿ ಮತ್ತು ಬದರ್ ಯುದ್ಧ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ಖಾಲಿದ್ ಬಿನ್ ವಲೀದ್‌ರೊಂದಿಗೆ ಸೇರಿ ಯಮಾಮ ಯುದ್ಧದಲ್ಲಿ ಭಾಗವಹಿಸಿದಾಗ ಗಾಯಗೊಂಡರು. ಅವರ ಗಾಯ ವಾಸಿಯಾಗಿದ್ದರೂ ಹಝ್ರತ್ ಉಮರ್(ರ)ರವರ ಖಿಲಾಫತ್ ಕಾಲದಲ್ಲಿ ಅವರ ಗಾಯ ಪುನಃ ಮರುಕಳಿಸಿತು ಮತ್ತು ಆ ಕಾರಣದಿಂದ ಅವರು ಮೃತರಾದರು. ಆದುದರಿಂದ ಅವರನ್ನು ಯಮಾಮ ಯುದ್ಧದಲ್ಲಿ ಶಹೀದರಾದವರ ಪಟ್ಟಿಯಲ್ಲಿ ಸೇರಿಸಲಾ.ಗುತ್ತದೆ.

ಇನ್ನೊಬ್ಬ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ಸಅಲಬ ಅಲ್ ಬಲವಿ ಅನ್‌ಸಾರಿ(ರ). ಅವರು ಬದರ್ ಯುದ್ಧದಲ್ಲಿಯೂ ಉಹುದ್ ಯುದ್ಧದಲ್ಲಿಯೂ ಭಾಗವಹಿಸಿದ್ದರು. ಇನ್ನು ಹಝ್ರತ್ ಮುಹಾಬ್ ಬಿನ್ ಸಅಲಬ ಅನ್‌ಸಾರಿ(ರ). ಬೈಅತೆ ಅಖಬದಲ್ಲಿ ಭಾಗವಹಿಸಿದ್ದರು. ಅನಂತರ ತನ್ನ ಸಹೋದರ ಹಝ್ರತ್ ಅಬ್ದುಲ್ಲಾ ಬಿನ್ ಸಅಲಬ ಜೊತೆ ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಇನ್ನು ಹಝ್ರತ್ ಮಾಲಿಕ್ ಬಿನ್ ಮಸ್‌ಊದ್ ಅನ್‌ಸಾರಿ(ರ). ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು.

ಇನ್ನು ಹಝ್ರತ್ ಅಬ್ದುಲ್ಲಾ ಬಿನ್ ಖೈಸ್ ಬಿನ್ ಸಖ್ರ್ ಅನ್‌ಸಾರಿ(ರ). ಅವರು ಬನೂ ಸಲ್ಮಾ ಗೋತ್ರದವರಾಗಿದ್ದರು. ಅವರು ತನ್ನ ಸಹೋದರ ಹಝ್ರತ್ ಮಅಬದ್ ಬಿನ್ ಖೈಸ್ ಜೊತೆಗೆ ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಇನ್ನು ಹಝ್ರತ್ ಅಬ್ದುಲ್ಲಾ ಬಿನ್ ಅಬಸ್ ಅನ್‌ಸಾರಿ(ರ). ಬದರ್ ಮತ್ತು ಅನಂತರದ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಇನ್ನೋರ್ವ ಸಹಾಬಿ ಹಝ್ರತ್ ಮುಅತಿಬ್ ಬಿನ್ ಖಶೀರ್ ಅನ್‌ಸಾರಿ(ರ). ಅವರು ಬೈಅತೆ ಅಖಬದಲ್ಲಿಯೂ ಬದರ್, ಉಹುದ್ ಯುದ್ಧಗಳಲ್ಲಿಯೂ ಭಾಗವಹಿಸಿದ್ದರು. ಇನ್ನು ಹಝ್ರತ್ ಸವಾದ್ ಬಿನ್ ರಝೀನ್ ಅನ್‌ಸಾರಿ(ರ). ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಮತ್ತೋರ್ವ ಸಹಾಬಿ ಹಝ್ರತ್ ಮುಅತೀ ಬಿನ್ ಔಫ್(ರ). ಅವರು ಅಬಿಸೀನಿಯಾದ ದ್ವಿತೀಯ ಹಿಜ್‌ರತ್‌ನಲ್ಲಿ ಸೇರಿದ್ದರು. ಅವರು ಬದರ್, ಉಹುದ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು 78ನೇ ವರ್ಷ ಪ್ರಾಯದಲ್ಲಿ ಹಿಜರಿ 57ರಲ್ಲಿ ನಿಧನ ಹೊಂದಿದರು.

ಇನ್ನು ಹಝ್ರತ್ ಬುಜೈರ್ ಬಿನ್ ಅಬೀ ಬುಜೈರ್(ರ). ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಮತ್ತೋರ್ವ ಸಹಾಬಿ ಹಝ್ರತ್ ಆಮಿರ್ ಬಿನ್ ಬಕೀರ್(ರ). ಬದರ್ ಯುದ್ಧದಲ್ಲಿ ತನ್ನ ಸಹೋದರರಾದ ಹಝ್ರತ್ ಅಯಾಸ್ ಬಿನ್ ಬಕೀರ್, ಹಝ್ರತ್ ಆಖಿಲ್ ಬಿನ್ ಬಕೀರ್ ಮತ್ತು ಹಝ್ರತ್ ಖಾಲಿದ್ ಬಿನ್ ಬಕೀರ್‌ರೊಂದಿಗೆ ಭಾಗವಹಿಸಿದರು. ಇವರೆಲ್ಲರೂ ಅನಂತರದ ಎಲ್ಲಾ ಯುದ್ಧಗಳಲ್ಲಿ ಸಹ ಭಾಗವಹಿಸಿದ್ದರು. ಈ ಸಹೋದರರೆಲ್ಲರೂ ದಾರ್ ಅರ್‌ಖಮ್‌ನಲ್ಲಿ ಇಸ್ಲಾಮಿಗೆ ಸೇರಿದವರಾಗಿದ್ದರು. ಹಝ್ರತ್ ಆಮಿರ್ ಯಮಾಮ ಯುದ್ಧದಲ್ಲಿ ಶಹೀದರಾದರು. ಇನ್ನು ಹಝ್ರತ್ ಅಮರ್ ಬಿನ್ ಸುರಾಖ ಬಿನ್ ಮುಅತಮಿರ್(ರ). ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ಅಮರ್ ಬಿನ್ ರಬೀಅ(ರ) ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮನ್ನು ನಖ್‌ಲದ ದಂಡಯಾತ್ರೆಗೆ ಕಳುಹಿಸಿದ್ದರು. ನಮ್ಮ ಜೊತೆ ಹಝ್ರತ್ ಅಮರ್ ಬಿನ್ ಸುರಾಖ ಸಹ ಇದ್ದರು. ಅವರ ದೇಹ ತೆಳುವಾಗಿದ್ದು ಎತ್ತರವಾಗಿತ್ತು. ಯಾತ್ರೆಯ ಸಂದರ್ಭದಲ್ಲಿ ಹೊಟ್ಟೆ ಹಸಿವಿನ ಕಾರಣದಿಂದ ಹಝ್ರತ್ ಅಮರ್ ಬಿನ್ ಸುರಾಖ(ರ) ತನ್ನ ಹೊಟ್ಟೆಗೆ ಕೈ ಇರಿಸಿ ಕುಳಿತು ಬಿಟ್ಟರು. ಹಸಿವಿನ ಕಾರಣದಿಂದ ಅವರಿಗೆ ನಡೆಯಲು ಸಾಧ್ಯವಾಗುತ್ತಿರಲಿಲ್ಲ. ನಾವು ಒಂದು ಕಲ್ಲನ್ನು ಅವರ ಹೊಟ್ಟೆಯ ಮೇಲೆ ಕಟ್ಟಿದಾಗ ಅವರು ನಡೆಯ ತೊಡಗಿದರು. ನಂತರ ನಾವು ಒಂದು ಅರಬಿ ಗೋತ್ರದ ತಂಗುದಾಣವನ್ನು ತಲಪಿದಾಗ ಅವರು ನಮಗೆ ಸತ್ಕಾರ ನೀಡಿದರು. ಅನಂತರ ನಾವು ಮುಂದೆ ಸಾಗಿದೆವು. ಆಗ ಹಝ್ರತ್ ಆಮರ್ ಬಿನ್ ಸುರಾಖ ಹೇಳಿದರು: ಮನುಷ್ಯನ ಹೊಟ್ಟೆಯನ್ನು ಕಾಲುಗಳು ಎತ್ತಿಕೊಂಡು ನಡೆಯುತ್ತಿವೆ ಎಂದು ನಾನು ಭಾವಿಸುತ್ತಿದ್ದೆ. ಆದರೆ ಈದಿನ ನನಗೆ ತಿಳಿಯಿತು ಹೊಟ್ಟೆಯೇ ಕಾಲುಗಳನ್ನು ಎತ್ತುತ್ತದೆ ಎಂದು. ಅವರು ಹಝ್ರತ್ ಉಸ್ಮಾನರ(ರ) ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು.

ಇನ್ನೋರ್ವ ಸಹಾಬಿ ಹಝ್ರತ್ ಸಾಬಿತ್ ಬಿನ್ ಹಝಾಲ್(ರ). ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಅವರು ಭಾಗವಹಿಸಿದ್ದರು. ಹಿಜರಿ ವರ್ಷ 12ರಲ್ಲಿ ಹಝ್ರತ್ ಅಬೂಬಕರ್(ರ)ರವರ ಖಿಲಾಫತ್ ಕಾಲದಲ್ಲಿ ಯಮಾಮ ಯುದ್ಧದಲ್ಲಿ ಶಹೀದರಾದರು. ಇನ್ನು ಹಝ್ರತ್ ಸಬೀಹ್ ಬಿನ್ ಖೈಸ್(ರ). ಅವರು ಖಝ್‌ರಜ್ ಗೋತ್ರಕ್ಕೆ ಸೇರಿದ ಅನ್‌ಸಾರಿಯಾಗಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರ ತಾಯಿ ಖದೀಜ ಬಿನ್ತ್ ಅಮರ್ ಬಿನ್ ಝೈದ್. ಅವರ ಪುತ್ರನ ಹೆಸರು ಅಬ್ದುಲ್ಲಾ ಎಂದು. ಹಝ್ರತ್ ಉಬಾದತ್ ಬಿನ್ ಖೈಸ್ ಮತ್ತು ಝೈದ್ ಬಿನ್ ಖೈಸ್ ಅವರ ಸಹೋದರರಾಗಿದ್ದರು. ಅವರು ಹಝ್ರತ್ ಅಬೂದರ್ದಾರವರ ಚಿಕ್ಕಪ್ಪನಾಗಿದ್ದರು. ಇನ್ನು ಹಝ್ರತ್ ಖಬಾಬ್ ರಝಿಯಲ್ಲಾಹು ಅನ್‌ಹು. ಅವರು ಉತ್‌ಬ ಬಿನ್

ಗರ್ಝ್‌ವಾನರ ಮಾಲಿಕರಾಗಿದ್ದರು. ಹಝ್ರತ್ ಉತ್‌ಬ ಬಿನ್ ಗರ್ಝ್‌ವಾನ್ ವಿಮೋಚಿತ ಗುಲಾಮರಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಹಿಜ್‌ರತ್ ಮಾಡಿದಾಗ ಹಝ್ರತ್ ಖಬಾಬರನ್ನು ಹಝ್ರತ್ ತಮೀಮ್ ಮೌಲಾ ಖರಾಶ್ ಬಿನ್ ಅಸ್‌ಮರೊಂದಿಗೆ ಸಹೋದರ ಸಂಬಂಧ ಸ್ಥಾಪಿಸಿದರು. ಹಝ್ರತ್ ಖಬಾಬ್ ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಹಿಜರಿ ವರ್ಷ 19ರಲ್ಲಿ ಐವತ್ತನೆಯ ವರ್ಷ ಪ್ರಾಯದಲ್ಲಿ ಮದೀನದಲ್ಲಿ ನಿಧನ ಹೊಂದಿದರು. ಅವರ ನಮಾಝೆ ಜನಾಝ ಹಝ್ರತ್ ಉಮರ್(ರ) ನಿರ್ವಹಿಸಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಸುಫ್‌ಯಾನ್ ರಝಿಯಲ್ಲಾಹು ಅನ್‌ಹು ಬಿನ್ ನಸ್ರ್ ಅನ್‌ಸಾರಿ. ಅವರು ಖಝ್‌ರಜ್ ಗೋತ್ರದ ಬನೂ ಜೌಶಮ್ ಕುಟುಂಬಕ್ಕೆ ಸೇರಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಒಂದು ವರದಿ ಪ್ರಕಾರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸುಫ್‌ಯಾನ್‌ರನ್ನು ಹಝ್ರತ್ ತುಫೈಲ್ ಬಿನ್ ಹಾರಿಸ್‌ರೊಂದಿಗೆ ಸಹೋದರ ಸಂಬಂಧ ಸ್ಥಾಪಿಸುವಂತೆ ಮಾಡಿದರು. ಇನ್ನೊಬ್ಬ ಸಹಾಬಿಯ ಹೆಸರು ಅಬೂ ಮುಗ್‌ಶಿತ್ತಾ(ಯಿ)(ರ) ಎಂದಾಗಿತ್ತು. ಅವರು ಅಬೂ ಮುಗ್‌ಶೀ ಎಂಬ ಹೆಸರಿನಲ್ಲಿಯೇ ಪ್ರಸಿದ್ಧರಾಗಿದ್ದರು. ಅವರ ಪೂರ್ಣನಾಮ ಸುಐದ್ ಬಿನ್ ಮುಗ್‌ಶೀ ಎಂದಾಗಿತ್ತು. ಅವರು ಬನೂ ಅಸದ್ ಗೋತ್ರದೊಂದಿಗೆ ಪ್ರತಿಜ್ಞಾ ಬದ್ಧ ಸಂಬಂಧ ಹೊಂದಿದ್ದರು. ಅವರು ಪ್ರಥಮವಾಗಿ ಹಿಜ್‌ರತ್ ಮಾಡಿದವರಲ್ಲಿ ಸೇರಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ವಹಬ್ ಬಿನ್ ಅಬೀಸಿರತ್(ರ). ಮೂಸಾ ಬಿನ್ ಅಖಬ ಹೇಳುತ್ತಾರೆ: ಹಝ್ರತ್ ವಹಬ್ ತನ್ನ ಸಹೋದರ ಅಮರ್‌ರೊಂದಿಗೆ ಬದರ್ ಯುದ್ಧದಲ್ಲಿ ಭಾಗವಹಿಸಿದರು ಎಂದು.

ಇನ್ನು ಹಝ್ರತ್ ತಮೀಮ್ ಮೌಲಾ ಬನೂ ಗನಮ್ ಅನ್‌ಸಾರಿ(ರ). ಅವರು ಬನೂ ಗನಮುಸ್ಸಲಿಮ್ ಎಂಬವರ ವಿಮೋಚಿತ ಗುಲಾಮರಾಗಿದ್ದರು. ಅವರು ಬದರ್, ಉಹುದ್ ಯುದ್ಧದಲ್ಲಿ ಭಾಗವಹಿಸಿದ್ದರು. ಇನ್ನು ಹಝ್ರತ್ ಅಬುಲ್ ಹಮ್‌ರಾ ಮೌಲಾ ಹಝ್ರತ್ ಹಾರಿಸ್ ಬಿನ್ ಇಫ್ರಾ(ರ) ಎಂಬ ಸಹಾಬಿ. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಬದರ್ ಯುದ್ಧದ ಕಾಲದಲ್ಲಿ ಹಝ್ರತ್ ಮುಆಝ್, ಹಝ್ರತ್ ಔಫ್, ಹಝ್ರತ್ ಮುಅವ್ವಿಝ್ ಮತ್ತು ಅವರ ವಿಮೋಚಿತ ಗುಲಾಮ್ ಅಬುಲ್ ಹಮ್‌ರಾ ಇವರೆಲ್ಲ ಅವರ ಬಳಿಯಿದ್ದ ಒಂದು ಒಂಟೆಯನ್ನು ಸರದಿ ಪ್ರಕಾರ ಏರಿ ಸಂಚರಿಸುತ್ತಿದ್ದರು. ಇನ್ನೋರ್ವ ಸಹಾಬಿ ಹಝ್ರತ್ ಅಬೂ ಸಬ್‌ರ ಬಿನ್ ಅಬೀ ರುಹ್‌ಮ್(ರ). ಅವರ ಮಾತೆ ಬರಾ ಅಬ್ದುಲ್ ಮುತ್ತಲಿಬರ ಮಗಳಾಗಿದ್ದರು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪಿತೃ ಸಹೋದರಿಯಾಗಿದ್ದರು. ಹಝ್ರತ್ ಅಬೂ ಸಬ್‌ರ ಅಬಿಸೀನಿಯಾ ದೇಶಕ್ಕೆ ಎರಡು ಸಾರಿ ಹಿಜ್‌ರತ್ ಮಾಡಿದವರಲ್ಲಿ ಸೇರಿದ್ದರು. ಮದೀನಕ್ಕೆ ಹಿಜ್‌ರತ್ ಮಾಡಿದಾಗ ಮುಂಝಿರ್ ಬಿನ್ ಮುಹಮ್ಮದರ ಮನೆಯಲ್ಲಿ ವಾಸಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಸಲ್ಮಾ ಬಿನ್ ಸಲಾಮರೊಂದಿಗೆ ಸಹೋದರ ಸಂಬಂಧವನ್ನು ಸ್ಥಾಪಿಸುವಂತೆ ಮಾಡಿದ್ದರು. ಅವರು ಬದರ್, ಉಹುದ್, ಖಂದಕ್ ಮತ್ತು ಇತರ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಸವಾರಿ ಮಾಡುವವರಾಗಿದ್ದರು. ಅವರು ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಸಾಬಿತ್ ಬಿನ್ ಅಮರ್ ಬಿನ್ ಝೈದ್(ರ). ಇಬ್ನು ಇಸ್‌ಹಾಖ್ ಮತ್ತು ಝುಹ್ರಿ ಎಂಬ ಚರಿತ್ರೆಗಾರರು ಅವರು ಬನೂ ನಜ್ಜಾರ್ ಗೋತ್ರಕ್ಕೆ ಸೇರಿದವರೆಂದು ಹೇಳಿದ್ದಾರೆ. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಶಹೀದರಾದರು. ಇನ್ನು ಹಝ್ರತ್ ಅಬುಲ್ ಅಲ್‌ವರ್ ಬಿನ್ ಹಾರಿಸ್(ರ). ಅವರ ಮಾತೆಯ ಹೆಸರು ಉಮ್ಮು ನಯ್ಯಾರ್ ಬಿನ್ತ್ ಅಯಾಸ್ ಬಿನ್ ಆಮಿರ್. ಅವರು ಬದರ್ ಮತ್ತು ಉಹುದ್ ಯುದ್ಧದಲ್ಲಿ ಭಾಗವಹಿಸಿದರು. ಇನ್ನೊಬ್ಬ ಸಹಾಬಿ ಹಝ್ರತ್ ಅಬಸ್ ಬಿನ್ ಆಮಿರ್ ಬಿನ್ ಅದೀ(ರ). ಅವರ ತಾಯಿಯ ಹೆಸರು ಉಮ್ಮುಲ್ ಬನೀನ್ ಬಿನ್ತ್ ಝುಹೀರ್ ಬಿನ್ ಸಅಲಬ. ಬೈಅತೆ ಅಖಬದಲ್ಲಿ ಭಾಗವಹಿಸಿದ ಎಪ್ಪತ್ತು ಸಹಾಬರಲ್ಲಿ ಅವರು ಒಬ್ಬರಾಗಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಇನ್ನು ಹಝ್ರತ್ ಅಯಾಸ್ ಬಿನ್ ಬುಕೈರ್(ರ) ಎಂಬ ಸಹಾಬಿ. ಅವರು ಬನೂ ಸಅದ್ ಬಿನ್ ಲೇಸ್ ಎಂಬ ಗೋತ್ರದವರಾಗಿದ್ದರು. ಆ ಗೋತ್ರ ಬನೂ ಅದೀ ಗೋತ್ರದೊಂದಿಗೆ ಪ್ರತಿಜ್ಞಾ ಬದ್ಧವಾಗಿತ್ತು. ಹಝ್ರತ್ ಆಖಿಲ್, ಹಝ್ರತ್ ಆಮಿರ್, ಹಝ್ರತ್ ಅಯಾಸ್ ಮತ್ತು ಹಝ್ರತ್ ಖಾಲಿದ್ ಒಟ್ಟಿಗೆ ಸೇರಿ ದಾರ್ ಅರ್‌ಖಮ್‌ನಲ್ಲಿ ಇಸ್ಲಾಮಿಗೆ ಸೇರಿದರು. ಮದೀನ ಹಿಜ್‌ರತ್ ಮಾಡಿದ ನಂತರ ಹಝ್ರತ್ ಅಯಾಸ್ ರಿಫಾಅ್ ಬಿನ್ ಅಬ್ದುಲ್ ಮುಂಝಿರ್‌ರ ಮನೆಯಲ್ಲಿ ವಾಸಿಸಿದರು. ಅವರಿಗೆ ಅವರ ತಾಯಿಯ ಕಡೆಯಿಂದ ಬೇರೆ ಮೂವರು ಸಹೋದರರಿದ್ದರು. ಅವರೆಲ್ಲರೂ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಇಬ್ನು ಯೂನುಸ್ ಹೇಳುತ್ತಾರೆ: ಈಜಿಪ್ಟ್ ಜಯಿಸುವ ಸಂದರ್ಭದಲ್ಲಿಯೂ ಹಝ್ರತ್ ಅಯಾಸ್ ಭಾಗವಹಿಸಿದ್ದರೆಂದು. ಅವರು ಹಿಜರಿ ವರ್ಷ 34ರಲ್ಲಿ ನಿಧನ ಹೊಂದಿದರು. ಇನ್ನೊಂದು ವರದಿ ಪ್ರಕಾರ ಹಝ್ರತ್ ಅಯಾಸ್ ಯಮಾಮ ಯುದ್ಧದಲ್ಲಿ ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಮಾಲಿಕ್ ಬಿನ್ ನಮೀಲ(ರ). ಅವರ ತಾಯಿಯ ಹೆಸರು ನಮೀಲ ಎಂದಾಗಿತ್ತು. ಅವರ ಗೋತ್ರದ ಹೆಸರು ಮುಝುಯ್ಯಿನ ಎಂದಾಗಿತ್ತು. ಅದು ಔಸ್ ಗೋತ್ರದ ಶಾಖೆಯಾಗಿತ್ತು. ಅದು ಬನೂ ಮುಆವಿಯ ಗೋತ್ರದೊಂದಿಗೆ ಪ್ರತಿಜ್ಞಾ ಬದ್ಧವಾಗಿತ್ತು. ಹಝ್ರತ್ ಮಾಲಿಕ್ ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಅವರು ಶಹೀದರಾದರು. ಇನ್ನು ಹಝ್ರತ್ ಅನೀಸ್ ಬಿನ್ ಖತಾದ ಬಿನ್ ರಬೀಅ(ರ). ಅವರು ಅನ್‌ಸಾರ್‌ಗಳ ಔಸ್ ಗೋತ್ರಕ್ಕೆ ಸೇರಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರು ಉಹುದ್ ಯುದ್ಧದಲ್ಲಿ ಶಹೀದರಾದರು. ಹಝ್ರತ್ ಖನ್‌ಸಾ ಬಿನ್ತ್ ಖಝಾಮ್ ಎಂಬ ಮಹಿಳೆ ಹಝ್ರತ್ ಅನೀಸರ ವಿಧವೆಯಾಗಿದ್ದರು. ಹಝ್ರತ್ ಖನ್‌ಸಾರವರ ಪಿತ ಅವರನ್ನು ಮುಝುಯ್ಯಿನ ಗೋತ್ರದ ಒಬ್ಬನಿಗೆ ವಿವಾಹ ಮಾಡಿಸಿಕೊಟ್ಟರು. ಆದರೆ ಹಝ್ರತ್

ಖನ್‌ಸಾರಿಗೆ ಆ ವಿವಾಹ ಇಷ್ಟಕರವಾಗಿರಲಿಲ್ಲ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ದೂರು ನೀಡಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ವಿವಾಹವನ್ನು ರದ್ದುಗೊಳಿಸಿದರು. (ಫಸ್‌ಖ್ ಮಾಡಿದರು). ಅನಂತರ ಹಝ್ರತ್ ಖನ್‌ಸಾರವರು ಹಝ್ರತ್ ಅಬೂ ಲಬಾಬರನ್ನು ವಿವಾಹವಾದರು. ವಿವಾಹ ಸಂಬಂಧದ ಬಗ್ಗೆ ಈ ಉದಾಹರಣೆ ವಿವಾಹದ ಬಗ್ಗೆ ಮಹಿಳೆಗಿರುವ ಸ್ವಾತಂತ್ರ್ಯವನ್ನು ಸೂಚಿಸುತ್ತದೆ. ತಮ್ಮ ಹೆಣ್ಣು ಮಕ್ಕಳ ಮೇಲೆ ಬಲಾತ್ಕಾರದಿಂದ ನಿರ್ಧಾರ ಹೇರುವವರು ಈ ಘಟನೆ ಬಗ್ಗೆ ಚಿಂತಿಸಬೇಕು.

ಇನ್ನೊಬ್ಬ ಸಹಾಬಿ ಹಝ್ರತ್ ರಾಫಿಅ್ ಬಿನ್ ಅನ್‌ಜದ ಅನ್‌ಸಾರಿ(ರ). ಅವರ ಪಿತನ ಹೆಸರು ಅಬ್ದುಲ್ ಹಾರಿಸ್ ಎಂದಾಗಿತ್ತು. ಅವರ ತಾಯಿಯ ಹೆಸರು ಅನ್‌ಜದ ಎಂದಾಗಿತ್ತು. ಅವರು ಬದರ್, ಉಹುದ್ ಮತ್ತು ಖಂದಕ್ ಯುದ್ಧಗಳಲ್ಲಿ ಭಾಗವಹಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ರಾಫಿಅ್ ಮತ್ತು ಹಝ್ರತ್ ಹುಸೈನ್ ಬಿನ್ ಹಾರಿಸ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಖುಲೈದ ಬಿನ್ ಖೈಸ್(ರ). ಅವರ ತಾಯಿ ಅಅ್‌ದಾಮ್ ಬಿನ್ತ್ ಅಲ್‌ಖೀನ್ ಬನೂ ಸಲ್ಮಾ ಗೋತ್ರದವರಾಗಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರ ಸಹೋದರ ಖಲ್ಲಾದ್ ಸಹ ಕೆಲವು ಚರಿತ್ರೆಗಾರರ ಪ್ರಕಾರ ಬದರೀ ಸಹಾಬಿ ಆಗಿದ್ದರು. ಇನ್ನೋರ್ವ ಸಹಾಬಿ ಹಝ್ರತ್ ಸಖ್‌ಫ್ ಬಿನ್ ಅಮರ್(ರ). ಅವರು ಬನೂ ಅಸದ್ ಗೋತ್ರದೊಂದಿಗೆ ಪ್ರತಿಜ್ಞಾ ಬದ್ಧರಾಗಿದ್ದರು. ಅವರು ತಮ್ಮ ಸಹೋದರರಾದ ಹಝ್ರತ್ ಮಾಲಿಕ್ ಬಿನ್ ಅಮರ್ ಮತ್ತು ಬತ್‌ಲಾಜ್ ಬಿನ್ ಅಮರ್‌ರೊಂದಿಗೆ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಮೊದಲು ಹಿಜ್‌ರತ್ ಮಾಡಿದವರಲ್ಲಿ ಅವರು ಸೇರಿದ್ದರು. ಅವರು ಬದರ್, ಉಹುದ್, ಖಂದಕ್, ಖೈಬರ್ ಯುದ್ಧಗಳಲ್ಲಿಯೂ ಹುದೈಬಿಯಾ ಸಂಧಿಯ ಸಂದರ್ಭದಲ್ಲೂ ಭಾಗವಹಿಸಿದರು. ಅವರು ಖೈಬರ್ ಯುದ್ಧದಲ್ಲಿ ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಸಬ್ರತ್ ಬಿನ್ ಫಾತಿಕ್(ರ). ಅವರು ಖರೀಮ್ ಬಿನ್ ಫಾತಿಕರ ಸಹೋದರರಾಗಿದ್ದರು. ಅವರು ಬನೂ ಅಸದ್ ಗೋತ್ರದವರಾಗಿದ್ದರು. ಅವರ ಪಿತನ ಹೆಸರು ಫಾತಿಕ್ ಬಿನ್ ಅಲ್ ಅಖ್‌ರಮ್ ಎಂದಾಗಿತ್ತು. ಐಮನ್ ಬಿನ್ ಖರೀಮ್ ಹೇಳುತ್ತಾರೆ: ನನ್ನ ಪಿತ ಮತ್ತು ಚಿಕ್ಕಪ್ಪ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರಿಬ್ಬರೂ ನನ್ನಿಂದ ದೃಢ ಪ್ರತಿಜ್ಞೆ ಪಡೆದಿದ್ದರು. ಯಾವುದೇ ಮುಸ್ಲಿಮನ ವಿರುದ್ಧ ಯುದ್ಧ ಮಾಡಲಾರನೆಂದು. ಅವರು ಹೀಗೆ ಸಹ ವರದಿ ಮಾಡಿದ್ದಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ತೂಗುವ ತಕ್ಕಡಿ ಪರಮ ದಯಾವಂತನಾದ ಅಲ್ಲಾಹನ ಕೈಯ್ಯಲ್ಲಿದೆ. ಅವನು ಕೆಲವು ಸಮುದಾಯಗಳನ್ನು ಮೇಲೆತ್ತುತ್ತಾನೆ. ಬೇರೆ ಕೆಲವು ಸಮುದಾಯಗಳನ್ನು ತಗ್ಗಿಸುತ್ತಾನೆ. ಹಝ್ರತ್ ಸಬ್ರತ್(ರ) ಹಝ್ರತ್ ಅಬೂ ದರ್ದಾರವರನ್ನು ದಾಟಿ ಹೋಗುವಾಗ ಅವರು ಹೇಳಿದರು: ಸಬ್ರತ್‌ರ ಜೊತೆ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಕಾಶವಿದೆ.

(ಖುತ್‌ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಜುಮುಅ ನಮಾಝಿನ ನಂತರ ಇಬ್ಬರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು. ಮೊದಲನೆಯದು, ಮುಕರ್ರಮ್ ಉಮ್‌ಕೂ ಅದ್‌ನಾನ್ ಇಸ್ಮಾಈಲ್ ಸಾಹಿಬ್, ಸದರ್ ಜಮಾಅತ್ ಮಲೇಶಿಯಾ ಅವರದಾಗಿದೆ. ಅವರು 2018 ಅಕ್ಟೋಬರ್ 8ರಂದು ತನ್ನ 74ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಎರಡನೆಯ ಜನಾಝ ರಬ್ವದ ಚೌಧರಿ ಖಲೀಲ್ ಅಹ್ಮದ್ ಸಾಹಿಬರ ಪತ್ನಿ ಹಮೀದ ಬೇಗಮರದಾಗಿದೆ. ಅವರು 2018 ಅಕ್ಟೋಬರ್ 5ರಂದು ತನ್ನ 84ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.**

———————*****———————

***Friday Sermon delivered by Hadrath Khaleefatul Masih Al Khamis***(atba)

*At,Masjid Baithul Futhuh, London. On 12-10-2018.*

**Summarized by***Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***:*khutuba.kannada@gmail.com*

**You can find all the Sermons archived at**: www.alislam.org/friday-sermon